C.C. No : 1279/2014
PW:1

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿ , ಪುತ್ತೂರು ದ.ಕ. ಇವರ ನ್ಯಾಯಾಲಯದಲ್ಲಿ

C.C.No:1279/2014
PW :1

| | |
|---|---|
| ಸಾಕ್ಷಿಯ ಹೆಸರು | :ಜಯರಾಮ |
| ತಂದೆಯ ಹೆಸರು | :ಕೆ. ನಾರಾಯಣ ಸ್ವಾಮಿ |
| ವಯಸ್ಸು | :56 ವರ್ಷ |
| ಉದ್ಯೋಗ | :ಎ ಎಸ್ ಐ , |
| ವಾಸ್ತವ್ಯ | :ವಿಟ್ಲ |

ದಿನಾಂಕ 04-01-2025 ರಂದು ಸಾಕ್ಷಿಗೆ ಈ ದಿನ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣವಚನ ಭೋಧಿಸಲಾಯಿತು.

**ಕಲಂ 299 ಸಿ.ಆರ್.ಪಿ.ಸಿ. ಅಡಿಯಲ್ಲಿ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ**

ನಾನು 22-01-2022 ರಿಂದ ಈ ವರೆಗೆ ಉಪ್ಪಿನಂಗಡಿ ಪೊಲೀಸು ಠಾಣೆ ಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ಆರೋಪಿತನ ವಿರುದ್ದ ಉದ್ಘೋಷಣೆಯನ್ನು ಹೊರಡಿಸಲು ಆದೇಶವಾಗಿದ್ದು ಅದರಂತೆ ನಾನು ದಿನಾಂಕ 20-03-2023 ರಂದು ಆರೋಪಿತನ ವಿಳಾಸವಾದ ಕಾಣಿಚಾರು ಮನೆ , ಕನ್ಯಾನ ಗ್ರಾಮ ಬಂಟ್ವಾಳ ತಾಲೂಕು ಎಂಬಲ್ಲಿಗೆ ಪಂಚರ ಸಮಕ್ಷಮ ಹೋಗಿ ಟಾಂ ಟಾಂ ಮಾಡಿ ಪ್ರಚಾರ ಮಾಡಿರುತ್ತೇನೆ ಮತ್ತು ಉದ್ಘೋಷಣಾ ಪ್ರತಿಯನ್ನು ಸದರಿ ಆರೋಪಿಯು ಮೇಲೆ ಹೇಳಿದ ವಿಳಾಸದಲ್ಲಿ, ಅಲ್ಲಿನ ಕನ್ಯಾನ ಪಂಚಾಯತ್ ಕಚೇರಿಗೆ ಮತ್ತು ತಾಲೂಕು ಕಚೇರಿಯ ನೋಟೀಸು ಬೋರ್ಡ್ ನಲ್ಲಿ ಅಂಟಿಸಿರುತ್ತೇವೆ. ನಂತರ ಪಂಚರ ಸಮಕ್ಷಮ ಮಹಜರು ಮಾಡಿರುತ್ತೇವೆ. ಸದರಿ ಮಹಜರನ್ನು ದಿನಾಂಕ 23-03-2023 ರಂದು ಸಮಯ 10.00 ಗಂಟೆಯಿಂದ 10.30 ಗಂಟೆ ವರೆಗೆ ಮಾಡಿರುತ್ತೇನೆ. ಉದ್ಘೋಷಣಾ ಪ್ರತಿಯನ್ನು ನಾನು ನೋಡುತ್ತಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಮಹಜರನ್ನು ನಾನು ಈಗ ನೋಡುತ್ತಿದ್ದು ಅದನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಬಂಟ್ವಾಳ ತಾಲೂಕು ಕಚೇರಿ ಕಂದಾಯ ಇಲಾಖೆ ಯವರು ನೀಡಿದ ವರದಿಯನ್ನು ನೋಡಲಾಗಿ ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು. ನಂತರ ಸದರಿ ಆರೋಪಿತರ ವಿರುದ್ಧ ಹೊರಡಿಸಿದ ಉದ್ಘೋಷಣೆ ಬಗ್ಗೆ ಮಾನ್ಯ ನ್ಯಾಯಾಲಯದಲ್ಲಿ ವರದಿಯೊಂದಿಗೆ ನಿವೇದಿಸಿಕೊಂಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ತಲೆ ಮರೆಸಿಕೊಂಡಿರುತ್ತಾನೆ.**

C.C. No : 1279/2014
PW:1

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ, ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು , ದ.ಕ.